**All India Radio: Bangalore**
**National Bulletin In Kannada**
**31.05.2025  1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**31.05.2025  1.10 p.m.**

**<><><><>**

ಮುಖ್ಯಾಂಶಗಳು

1. ಭೋಪಾಲ್‌ನಲ್ಲಿ ದೇವಿ ಅಹಲ್ಯಾ ಬಾಯಿ ಹೋಳ್ಕರ್ ಮಹಿಳಾ ಸಶಕ್ತೀಕರಣ ಸಮ್ಮೇಳನದಲ್ಲಿ ಪ್ರಧಾನಿ ಭಾಗಿ: ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ
2. ಪಹಲ್ಗಾಮ್ ಭಯೋತ್ಪಾದನಾ ದಾಳಿ ಖಂಡಿಸಿ ಭಾರತಕ್ಕೆ ಬೆಂಬಲ ಸೂಚಿಸಿದ ನ್ಯೂಜಿಲೆಂಡ್ ಉಪ ಪ್ರಧಾನಿ ವಿನ್‌ಸ್ಟನ್ ಪೀಟರ್ಸ್
3. ಶಾಂಫ್ರೀಲಾ ಸಂವಾದ ೨೦೨೫; ಭಾರತ - ಬ್ರೆಜಿಲ್ ದ್ವಿಪಕ್ಷೀಯ ಸಂಬಂಧ ಬಲವರ್ಧನೆಗೆ ಒತ್ತು
4. ಟರ್ಕಿ ವಿಮಾನಯಾನ ಸಂಸ್ಥೆಯೊಂದಿಗಿನ ಇಂಡಿಗೋ ಗುತ್ತಿಗೆ ಒಪ್ಪಂದವನ್ನು ೩ ತಿಂಗಳೊಳಗೆ ಕೊನೆಗೊಳಿಸುವಂತೆ ಕೇಂದ್ರ ಸರ್ಕಾರ ನಿರ್ದೇಶನ
5. ಉಲಾನ್ ಬಾತರ್ ಓಪನ್ ಕುಸ್ತಿ ಕ್ರೀಡಾಕೂಟ; ಭಾರತಕ್ಕೆ ೪ ಚಿನ್ನದ ಪದಕ

<><><><>

ಒಂದು ದಿನದ ಮಧ್ಯಪ್ರದೇಶದ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ಭೋಪಾಲ್‌ನಲ್ಲಿಂದು ಲೋಕಮಾತಾ ದೇವಿ ಅಹಲ್ಯಾ ಬಾಯಿ ಹೋಳ್ಕರ್ ಅವರ ೩೦೦ ನೇ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಆಯೋಜಿಸಿರುವ ಲೋಕಮಾತಾ ದೇವಿ ಅಹಲ್ಯಾಬಾಯಿ ಮಹಿಳಾ ಸಶಕ್ತಿಕರಣ ಮಹಾಸಮ್ಮೇಳನದಲ್ಲಿ ಪಾಲ್ಗೊಂಡರು. ಈ ವೇಳೆ, ದೇವಿ ಅಹಲ್ಯಾ ಬಾಯಿ ಹೋಳ್ಕರ್ ಅವರ ಸ್ಮರಣೆಯಲ್ಲಿ ಮಧ್ಯಪ್ರದೇಶದ ಸಂಸ್ಕೃತಿ ಇಲಾಖೆಯ ವತಿಯಿಂದ ನೀಡಲಾಗುವ ರಾಷ್ಟ್ರೀಯ ದೇವಿ ಅಹಲ್ಯಾ ಬಾಯಿ ಸಮ್ಮಾನ್ ಗೌರವವನ್ನು ಮಹಿಳಾ ಸಾಧಕಿಗೆ ಪ್ರಧಾನಿ ನರೇಂದ್ರ ಮೋದಿ ಪ್ರದಾನ ಮಾಡಿದರು. ಈ ಗೌರವವನ್ನು ಸಮಾಜಿಕ ಕಾರ್ಯ, ಸಂಸ್ಕೃತಿ, ಸಾಹಿತ್ಯ, ಶಿಕ್ಷಣ, ಮಹಿಳಾ ಸಬಲೀಕರಣ ಮತ್ತು ಜನ ಕಲ್ಯಾಣದಂತಹ ಕ್ಷೇತ್ರಗಳಲ್ಲಿ ಉತ್ಕೃಷ್ಟ ಸಾಧನೆ ಮಾಡಿದ ಮಹಿಳಾ ಸಾಧಕಿಯರಿಗೆ ನೀಡಲಾಗುತ್ತದೆ. ಪ್ರಶಸ್ತಿ, ಒಂದು ಪ್ರಮಾಣಪತ್ರ ಮತ್ತು ೫ ಲಕ್ಷ ಸಮ್ಮಾನ ಧನವನ್ನು

ಒಳಗೊಂಡಿದೆ. ಇದೇ ವೇಳೆ ಪ್ರಧಾನಿ, ಅಹಲ್ಯಾ ಬಾಯಿ ಹೋಳ್ಕರ್ ಅವರ ಭಾವಚಿತ್ರವಿರುವ ಅಂಚೆ ಚೀಟಿಯನ್ನು ಹಾಗೂ ಅವರ ೩೦೦ನೇ ಜನ್ಮ ವರ್ಷಾಚರಣೆಯ ಸ್ಮರಣಾರ್ಥ ನಾಣ್ಯವನ್ನು ಅನಾವರಣಗೊಳಿಸಿದರು. ಕಾರ್ಯಕ್ರಮದಲ್ಲಿ ಪ್ರಧಾನಿ ಬಹು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ೪೮೩ ಕೋಟಿ ರೂಪಾಯಿ ಮೌಲ್ಯದ ಒಂದು ಸಾವಿರದ ೯೭೧ ನೂತನ ಅಟಲ್ ಗ್ರಾಮ ಸೇವಾ ಸದನಗಳಿಗೆ ಶಂಕುಸ್ಥಾಪನೆ ನೆರವೇರಿಸಿ, ಮೊದಲ ಕಂತನ್ನು ಪ್ರಧಾನಿ ಬಿಡುಗಡೆಗೊಳಿಸಿದರು. ನಂತರ ಈ ಪ್ರದೇಶದಲ್ಲಿ ವಾಯು ಸಂಪರ್ಕವನ್ನು ಹೆಚ್ಚಿಸಲು ಪ್ರಧಾನಿಯವರು ದಾಟಿಯಾ ಮತ್ತು ಸತ್ನಾ ವಿಮಾನ ನಿಲ್ದಾಣಗಳನ್ನು ಮತ್ತು ಇಂದೋರ್ ಮೆಟ್ರೋದ ಹಳದಿ ಮಾರ್ಗದ ಆದ್ಯತಾ ಕಾರಿಡಾರ್‌ನಲ್ಲಿ ಪ್ರಯಾಣಿಕರ ಸೇವೆಗಳನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಪ್ರಧಾನಿ ಮಹಿಳಾ ನೇತೃತ್ವದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಒತ್ತು ನೀಡಿದೆ ಎಂದು ತಿಳಿಸಿದ್ದಾರೆ.

ಧ್ವನಿ : ಪ್ರಧಾನಿ ಮೋದಿ (೩೦ ಸೆಕೆಂಡ್‌ಗಳು)

<><><><>

ನ್ಯೂಜಿಲೆಂಡ್‌ನ ಉಪಪ್ರಧಾನಿ ಹಾಗೂ ವಿದೇಶಾಂಗ ಸಚಿವ ವಿನ್‌ಸ್ಟನ್  ಪೀಟರ್ಸ್ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಂನಲ್ಲಿ ನಡೆದ ಇತ್ತೀಚಿನ ಭಯೋತ್ಪಾದನಾ ದಾಳಿಯನ್ನು ಖಂಡಿಸಿದ್ದಾರೆ ಮತ್ತು ಭಾರತದ ಜನತೆಗೆ ನ್ಯೂಜಿಲೆಂಡ್‌ನ ಬದ್ಧತೆ ಹಾಗೂ ಸಹಾನುಭೂತಿಯನ್ನೂ ವ್ಯಕ್ತಪಡಿಸಿದ್ದಾರೆ. ಭಾರತ ಭೇಟಿಯ ಸಂದರ್ಭದಲ್ಲಿ ಪೀಟರ್ಸ್ ಅವರು ಭಾರತದ ವಿದೇಶಾಂಗ ಸಚಿವ ಡಾ. ಎಸ್. ಜಯಶಂಕರ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಚರ್ಚೆಯಲ್ಲಿ ವಾಣಿಜ್ಯ ಮತ್ತು ಆರ್ಥಿಕತೆ, ರಕ್ಷಣಾ ಸಹಕಾರ, ಸಂಪ್ರದಾಯಿಕ ಔಷಧ ಪದ್ಧತಿ, ಕ್ರೀಡೆ, ಶಿಕ್ಷಣ ಹಾಗೂ ಜನರಿಂದ ಜನರ ಸಂಪರ್ಕ ಸೇರಿದಂತೆ ಹಲವು ಪರಸ್ಪರ ಹಿತಾಸಕ್ತಿ ವಿಷಯಗಳ ಕುರಿತು ಚರ್ಚಿಸಲಾಗಿದೆ. ಇದೇ ವೇಳೆ ಮುಕ್ತ, ಸುರಕ್ಷಿತ ಮತ್ತು ಸಮೃದ್ಧ ಇಂಡೋ-ಪೆಸಿಫಿಕ್ ಪ್ರದೇಶದ ಬದ್ಧತೆಯನ್ನು ಪುನರುಚ್ಚರಿಸಲಾಯಿತು.

<><><><>

ಭಯೋತ್ಪಾದನೆ ನಿರ್ಮೂಲನೆಯೆಡೆಗಿನ ಬದ್ಧತೆಯ ಭಾಗವಾಗಿ ವಿದೇಶಗಳಿಗೆ ತೆರಳಿರುವ ಏಳು ಬಹುಪಕ್ಷ ಸಂಸದೀಯ ನಿಯೋಗಗಳು ವಿವಿಧ ಉನ್ನತಮಟ್ಟದ ಮಾತುಕತೆಗಳಲ್ಲಿ ತೊಡಗುತ್ತಿವೆ. ಕೊಲಂಬಿಯಾ ಪ್ರವಾಸದಲ್ಲಿರುವ ಕಾಂಗ್ರೆಸ್ ಸಂಸದ ಶಶಿ ತರೂರ್ ನೇತೃತ್ವದ ಸಂಸದೀಯ

ನಿಯೋಗ, ಕೊಲಂಬಿಯಾ ವಿದೇಶಾಂಗ ವ್ಯವಹಾರಗಳ ಉಪ ಸಚಿವರಾದ ರೋಸಾ ಯೋಲಾಂಡ ವಿಲ್ಲಾವಿಸೆನ್‌ಶಿಯೊ ಹಾಗೂ ಅವರ ಹಿರಿಯ ಸಹೋದ್ಯೋಗಿಗಳೊಂದಿಗೆ ಏಷ್ಯಾ-ಫೆಸಿಪಿಕ್ ಪ್ರದೇಶಗಳಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಮಾತುಕತೆ ನಡೆಸಿದೆ. ಶಿವಸೇನಾ ಸಂಸದ ಡಾ. ಶ್ರೀಕಾಂತ್ ಏಕನಾಥ್ ಶಿಂಧೆ ನೇತೃತ್ವದ ನಿಯೋಗ ಪಶ್ಚಿಮ ಆಫ್ರಿಕಾದ ರಾಷ್ಟ್ರವಾದ ಸಿಯರಾ ಲಿಯೋನೆಕ್ಕೆ ನೀಡಿದ್ದ ಭೇಟಿಯನ್ನು ಕೊನೆಗೊಳಿಸಿದೆ. ನಿಯೋಗ ಅಲ್ಲಿನ ಸಂಸತ್ತಿನ ಸ್ಪೀಕರ್, ರಕ್ಷಣಾ ಉಪಸಚಿವ, ಹಂಗಾಮಿ ವಿದೇಶಾಂಗ ಸಚಿವ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳೊಂದಿಗೆ ಮಹತ್ವದ ಸಭೆಗಳನ್ನು ನಡೆಸಿ, ಭಯೋತ್ಪಾದನೆ ವಿರುದ್ಧದ ಭಾರತದ ನಿಲುವನ್ನು ಮನದಟ್ಟು ಮಾಡಿಸಿದೆ.  ಡಿಎಂಕೆ ಸಂಸದೆ ಕನ್ನಿಮೊಳಿ ನೇತೃತ್ವದ ನಿಯೋಗ ಪ್ರಸ್ತುತ ಲ್ಯಾಟ್ವಿಯಾ ಪ್ರವಾಸದಲಿದ್ದು, ಅಲ್ಲಿನ ಭಾರತೀಯ ಸಮುದಾಯ ಆಯೋಜಿಸಿದ್ದ ಸಿಂಧೂರ್ ಸಮ್ಮಾನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಾದ ನಡೆಸಿದೆ.

<><><>

ಸಿಂಗಾಪುರದಲ್ಲಿ ನಡೆದಿರುವ ಶಾಂಘ್ರಿಲಾ ಸಂವಾದ - ೨೦೨೫ರಲ್ಲಿ ಭಾರತ ಮತ್ತು ಬ್ರೆಜಿಲ್ ತಮ್ಮ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು ಮತ್ತು ಮುಕ್ತ ಹಾಗೂ ಎಲ್ಲರನ್ನೊಳಗೊಳ್ಳುವ ಶಾಂತಿಯುತ ಇಂಡೋ-ಪೆಸಿಫಿಕ್ ಪ್ರದೇಶ ಖಚಿತ ಪಡಿಸಿಕೊಳ್ಳಲು ಬದ್ಧತೆಯನ್ನು ಪುನರುಚ್ಚರಿಸಿವೆ. ಭಾರತದ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌವ್ಹಾಣ್ ಮತ್ತು ಬ್ರೆಜಿಲ್ ಸಶಸ್ತ್ರ ಪಡೆ ಮುಖ್ಯಸ್ಥ ಅಡ್ಮಿರಲ್ ಅಗುಯಾರ್ ಫ್ರೇರೆ ಪರಸ್ಪರ ಹಿತಾಸಕ್ತಿಯ ಮತ್ತು ಹಂಚಿಕೆಯ ವಿವಿಧ ವಿಷಯಗಳ ಕುರಿತು ಮಾತುಕತೆ ನಡೆಸಿದರು. ಇದೇ ವೇಳೆ, ನಿಯಮಾಧಾರಿತ ಅಂತಾರಾಷ್ಟ್ರೀಯ ವ್ಯವಸ್ಥೆಯ ಮಹತ್ವವನ್ನು ಮತ್ತು ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳಲ್ಲಿ ಉಭಯ ರಾಷ್ಟ್ರಗಳ ಬೆಳೆಯುತ್ತಿರುವ ಸಾಮರಸ್ಯದ ಬಗ್ಗೆ ಒತ್ತಿ ಹೇಳಲಾಗಿದೆ. ಚರ್ಚೆಯ ವೇಳೆ ಪ್ರಾದೇಶಿಕ ಭದ್ರತೆ, ಕಡಲ ಸ್ವಾತಂತ್ರ್ಯ ಮತ್ತು ಸುಸ್ಥಿರ ಅಭಿವೃದ್ಧಿ ಕುರಿತಾಗಿ ಉಭಯ ರಾಷ್ಟ್ರಗಳ ನಡುವೆ ಸಹಕಾರದ ಬಗ್ಗೆ ಮಾತುಕತೆ ನಡೆದಿದೆ.

<><><>

ವಿಕಸಿತ ಕೃಷಿ ಸಂಕಲ್ಪ ಕುರಿತಂತೆ ಇಂದು ರಾತ್ರಿ ೮ ಗಂಟೆಗೆ ಆಕಾಶವಾಣಿಯ ಮುಖ್ಯವಾಹಿನಿಯಲ್ಲಿ ವಿಶೇಷ ಸಂವಾದ ಕಾರ್ಯಕ್ರಮ ಪ್ರಸಾರವಾಗಲಿದೆ. ಭಾರತೀಯ ತೋಟಗಾರಿಕಾ ಸಂಸ್ಥೆ

ಹೆಸರಘಟ್ಟದ ನಿವೃತ್ತ ನಿರ್ದೇಶಕ ಡಾ. ಎಂ. ಆರ್ ದಿನೇಶ್ ಸಂವಾದದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಲಿದ್ದು, ನಿವೃತ್ತ ಕೃಷಿ ವಿಜ್ಞಾನಿ ಡಾ. ಬಿ ನಾರಾಯಣಸ್ವಾಮಿ ಚರ್ಚೆ ನಡೆಸಿಕೊಡಲಿದ್ದಾರೆ.

<><><>

ಭಾರತೀಯ ನಾಗರಿಕ ವಿಮಾನಯಾನ ಸಂಸ್ಥೆಯಾದ ಇಂಡಿಗೋಗೆ ಟರ್ಕಿ ವಿಮಾನಯಾನ ಸಂಸ್ಥೆಯೊಂದಿಗಿನ ತನ್ನ ಗುತ್ತಿಗೆ ಒಪ್ಪಂದವನ್ನು ೩ ತಿಂಗಳೊಳಗಾಗಿ ಕೊನೆಗೊಳಿಸುವಂತೆ ಕೇಂದ್ರ ಸರ್ಕಾರ ನಿರ್ದೇಶಿಸಿದೆ. ದೆಹಲಿ ಸೇರಿದಂತೆ ದೇಶದ ೯ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಸೇವೆ ಒದಗಿಸುತ್ತಿದ್ದ ಟರ್ಕಿಯ ಸೆಲೆಬಿ ಏವಿಯೇಷನ್ ಸಂಸ್ಥೆಯ ಭದ್ರತಾ ಅನುಮತಿ ರದ್ದುಗೊಳಿಸಿದ ಕೆಲವೇ ವಾರಗಳ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ. ಟರ್ಕಿ ವಿಮಾನಯಾನ ಸಂಸ್ಥೆಯಿಂದ ಎರಡು ಬೋಯಿಂಗ್ ೭೭೭ ವಿಮಾನಗಳನ್ನು ನಿರ್ವಹಿಸುತ್ತಿದ್ದ ಇಂಡಿಗೋಗೆ ಇಂದಿನವರೆಗೆ ಪರವಾನಗಿ ಇತ್ತು. ಈ ಪರವಾನಗಿಯ ೬ ತಿಂಗಳ ವಿಸ್ತರಣೆಗೆ ಇಂಡಿಗೋ, ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಕೋರಿತ್ತು. ಆದರೆ ಪರವಾನಗಿಯ ವಿಸ್ತರಣೆಯನ್ನು ಸಚಿವಾಲಯ ನಿರಾಕರಿಸಿದೆ.

<><><>

ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರತೆ ರಾಷ್ಟ್ರದ ಕಾರ್ಯತಂತ್ರ ಸ್ವಾಯತ್ತತೆ ಕಾಪಾಡಲು ಮಾತ್ರವಲ್ಲದೆ, ವಿಕಸಿತ ಭಾರತದ ಮಹತ್ವಾಕಾಂಕ್ಷಿ ಗುರಿ ಸಾಧಿಸಲು ಅತ್ಯಗತ್ಯ ಎಂದು ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಹೇಳಿದ್ದಾರೆ. ದೆಹಲಿಯಲ್ಲಿ ನಡೆದ ರಕ್ಷಣಾ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ೨೦೧೫ರಲ್ಲಿ ವಿಶ್ವದ ಅತಿ ಹೆಚ್ಚು ರಕ್ಷಣಾ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುವ ರಾಷ್ಟ್ರವಾಗಿದ್ದ ರಾಷ್ಟ್ರ, ಇಂದು ಅಗ್ರ ೨೫ ರಫ್ತುದಾರ ರಾಷ್ಟ್ರಗಳ ಪೈಕಿ ಒಂದಾಗಿ ಪರಿವರ್ತನೆಯಾಗಿದೆ. ಇಂದು ನೂರಕ್ಕೂ ಹೆಚ್ಚು ಭಾರತೀಯ ಕಂಪನಿಗಳು ಕ್ಷಿಪಣಿ, ರಾಕೆಟ್ ಲಾಂಚರ್‌ಗಳು, ಸಶಸ್ತ್ರ ವಾಹನಗಳು ಡಾರ್ನಿಯರ್ ವಿಮಾನ ಸೇರಿದಂತೆ ವಿವಿಧ ಬಗೆಯ ರಕ್ಷಣಾ ಉತ್ಪನ್ನಗಳನ್ನು ನೂರಕ್ಕೂ ಹೆಚ್ಚು ರಾಷ್ಟ್ರಗಳಿಗೆ ರಫ್ತು ಮಾಡುತ್ತಿದೆ ಎಂದರು.

<><><>

ತಂಬಾಕು ಬಳಕೆಯ ಅಪಾಯಗಳ ವಿರುದ್ಧ ಜಾಗೃತಿ ಮೂಡಿಸಲು ಇಂದು ಜಾಗತಿಕವಾಗಿ ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ, ವಿಶ್ವಾದ್ಯಂತ ಅಂದಾಜು ೧.೩ ಶತಕೋಟಿ ಜನರು ತಂಬಾಕು ಸೇವಿಸುತ್ತಾರೆ, ಇದು ತಡೆಗಟ್ಟಬಹುದಾದ ಸಾವಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

<><><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಉಕ್ಕು ಆಮದು ಮೇಲಿನ ತೆರಿಗೆಯನ್ನು ಶೇಕಡ ೨೫ ರಿಂದ ಶೇಕಡ ೫೦ ರಷ್ಟು ಹೆಚ್ಚಿಸುವುದಾಗಿ ಘೋಷಿಸಿದ್ದಾರೆ. ಅಮೆರಿಕದ ಕೈಗಾರಿಕೆಯನ್ನು ರಕ್ಷಿಸುವ ಉದ್ದೇಶದಿಂದ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

<><><><>

ಮಂಗೋಲಿಯಾದಲ್ಲಿ ನಡೆದ ಉಲಾನ್ ಬಾತರ್ ಓಪನ್ ಕುಸ್ತಿ ಕ್ರೀಡಾಕೂಟದಲ್ಲಿ ಭಾರತೀಯ ಕುಸ್ತಿಪಟುಗಳು ೪ ಚಿನ್ನದ ಪದಕ ಸೇರಿದಂತೆ ಒಟ್ಟು ೭ ಪದಕಗಳನ್ನು ಜಯಿಸಿ, ಪ್ರಬಲ ಪ್ರದರ್ಶನ ನೀಡಿವೆ. ಮಹಿಳಾ ೫೩ ಕೆಜಿ ವಿಭಾಗದಲ್ಲಿ ಭಾರತದ ಅಂತಿಮ್ ಪಾನ್‌ಗಲ್, ತಟಸ್ಥ ಕುಸ್ತಿಪಟು ನಟಾಲಿಯಾ ಮಾಲಿಶೆವಾ ವಿರುದ್ಧ ೧೦-೦ ಅಂತರದಲ್ಲಿ ಗೆಲುವು ಸಾಧಿಸಿ, ಚಿನ್ನದ ಪದಕ ಗೆದ್ದರು. ಮಹಿಳಾ ೫೭ ಕೆಜಿ ವಿಭಾಗದಲ್ಲಿ ನೇಹಾ ಸಾಂಗ್ವಾನ್ ಚಿನ್ನ ಗೆದ್ದರೆ, ೫೯ ಕೆಜಿ ವಿಭಾಗದಲ್ಲಿ ಮುಸ್ಕಾನ್, ೭೨ ಕೆ.ಜಿ. ವಿಭಾಗದಲ್ಲಿ ಹರ್ಷಿತಾ, ನಾರ್ಡಿಕ್ ಪ್ರಕಾರದ ಸ್ಪರ್ಧೆಯಲ್ಲಿ ಸ್ವರ್ಣ ಪದಕ ಗೆದ್ದರು.

<><><><>

ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಪುರುಷರ ೫೦೦೦ ಮೀಟರ್ ಸ್ಪರ್ಧೆಯಲ್ಲಿ ಗುಲ್ವೀರ್ ಸಿಂಗ್ ೧೩:೨೪.೭೮ ರಲ್ಲಿ ಗುರಿ ತಲುಪಿ ಸ್ವರ್ಣ ಪದಕ ಗೆದ್ದಿದ್ದಾರೆ. ಈ ನಡುವೆ, ಮಹಿಳೆಯರ ಹೈಜಂಪ್ ಸ್ಪರ್ಧೆಯಲ್ಲಿ, ೧೮ ವರ್ಷದ ಪೂಜಾ ೧.೮೯ ಮೀಟರ್ ಎತ್ತರದ ಜಿಗಿತ ಸಾಧಿಸಿ ಈ ಆವೃತ್ತಿಯ ತನ್ನ ಶ್ರೇಷ್ಠ ಪ್ರದರ್ಶನವನ್ನು ನೀಡಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>